# 'Providing employment to youth is biggest challenge'

## Skill ministry headed by CM to offer training to five lakh youth this year

**DHARWAD: Large & Medium Industries Minister R V Deshpande has stated that the biggest challenge in India is to provide employment to the youths. Almost 60% of the India's population is between the age of 18 to 35 years and making them industry-ready is the need of the hour, he added.**




**Large & Medium Industries Minister R V Deshpande unveiling a plaque to mark the inauguration of Tata Hitachi Operator Training Centre at Belur Industrial Area in Dharwad on Friday. Tata Hitachi Managing Director Sandeep Singh is seen.** DH PHOTO

He noted this while speaking after inaugurating Tata Hitachi Operator training Centre at Belur Industrial Area in Dharwad on Friday.

He said that by 2025, India will emerge as the country of young population. To empower this population with jobs, there is a need for growth of industrial sector. However, there is a stiff competition in industrial sector and only those who possess creative skills, fare better chance of getting jobs.

In this regard, both the Centre and the State have launched skill development programme and need-based training will be imparted to the youths free of cost, he added.

In Karnataka, a separate Skill Ministry has been formed headed by Chief Minister Siddaramaiah and this year, the government is aiming to provide skill training to more than five lakh youths, said the minister.

In the last couple of years, the automobile sector was going through a rough phase but now, the Supreme Court has given permission to give permit for 10 mining companies in State. With the clearance of this, there will be growth of automobile sector in State, he added.

The NDA government while coming to power had assured of creating one crore jobs every year, but have drastically failed to keep up to their promises. The unemployment rate in other States is as high as 2%, but in Karnataka, the unemployment rate is 1.1%.

Karnataka is doing very well in creating jobs and is also invoking industries to set up more plants here.

Mr Deshpande said, to enhance the facilities at Belur industrial area, the government has sanctioned ₹ 18 crore.

### Tata Hitachi

Referring to the Tata Hitachi, Mr Deshpande said that Tata have always been a wonder partners and have invested in large scale in Karnataka. The Tata Hitachi Operator Training Centre set up in Dharwad would be providing skill training to 950 youths every year.

The company heads have been asked to expand their area of operation and see that youths who have completed SSLC, ITI, diploma and other technical course from parts of North Karnataka get training at this centre.

This apart, the government has also conducted series of meeting with Civil Aviation Minister asking them to operate two daily flights from Hubballi airport.

This airport has been upgraded and even boeings can be landed here. Hence, one direct flight to Bengalur and another link flight to Mumbai, can further boost the industrial sector here, he said.

### Kali river

Mr Deshpande who is also the district in-charge minister of Uttar Kannada stated that the project of supplying water from Kali river to Alnavar town, has got cabinet clearance on Thursday.

Chief Minister Siddaramaiah has sanctioned ₹ 72 crore for this project which would supply water to 14 villages in Haliyal taluk and to the newly proposed Alnavar taluk. This apart, additional ₹ 20 crore is earmarked to implement irrigation scheme which will bring 20,000 hectare land in this region under irrigation facility.

District In-charge Minister Vinay Kulkarni, Tata Hitachi MD Sandeep Singh, Tata Hitachi Dharwad Plant Head S Umapathi and others were present.

**DH News Service**

### ಸಚಿವ ಆರ್.ವಿ. ದೇಶಪಾಂಡೆ ಹೇಳಿಕೆ

# ಭ್ರಷ್ಟಾಚಾರ ಕಡಿವಾಣಕ್ಕೆ ಜಿಎಸ್‌ಟಿ ಸ್ವಾಗತಾರ್ಹ

▸ ದಿಗಂತ ವರದಿ: ಧಾರವಾಡ, ಜೂ.23

ದಿಗಂತ ಚಿತ್ರ



ಭಾರತ ದೇಶಕ್ಕೆ ಜಿಎಸ್‌ಟಿ ಉತ್ತಮವಾದುದು. ಇದರಿಂದ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬಹುದು. ಹೀಗಾಗಿ ಕೇಂದ್ರ ಸರ್ಕಾರದ ಜಿಎಸ್‌ಟಿ ಕ್ರಮವನ್ನು ಬೃಹತ್ ಹಾಗೂ ಮಧ್ಯಮ ಕೈಗಾರಿಕೆ ಸಚಿವ ಆರ್.ವಿ.ದೇಶಪಾಂಡೆ ಸ್ವಾಗತಿಸುವುದಾಗಿ ಹೇಳಿದರು.

ಶುಕ್ರವಾರ ಬೇಲೂರು ಕೈಗಾರಿಕಾ ಪ್ರದೇಶದಲ್ಲಿ ಟಾಟಾ ಹಿಟಾಚ್ ತರಬೇತಿ ಕೇಂದ್ರ ಆರಂಭಕ್ಕೆ ಚಾಲನೆ ನೀಡಿದ ನಂತರ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ಟ್ರ್ಯಾಕ್ಟರ್, ಕೃಷಿ ಹಾಗೂ ಕೈಗಾರಿಕೆಯ ಪರಿಕರಗಳ ಮೇಲೂ ಜಿಎಸ್‌ಟಿ ಹೇರುವುದರಿಂದ ರೈತರಿಗೆ ತೊಂದರೆಯಾಗುತ್ತದೆ ಎಂದರು.

ಅಲ್ಲದೇ, ಈ ಕುರಿತಂತೆ ಕೇಂದ್ರ ಸರ್ಕಾರಕ್ಕೂ ತಿಳಿಸಿದ್ದು, ರಾಜ್ಯದ ಕೃಷಿ ಸಚಿವ ಕೃಷ್ಣಬೈರೇಗೌಡರು ದೆಹಲಿಗೆ ತೆರಳಿ ನಮ್ಮ ವಿಚಾರಗಳನ್ನು ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಕೊಡಲಿದ್ದಾರೆ. ಒಂದು ದೇಶ, ಒಂದೆ ತೆರಿಗೆ ನೀತಿಯ ಕೇಂದ್ರ ಈ ನಿರ್ಧಾರ ಸ್ವಾಗತಿಸುವುದಾಗಿ ಹೇಳಿದರು. ಸಾಲಮನ್ನಾ ಪ್ಯಾಷನ್ ಎಂದು ಹೇಳಿಕೆ ನೀಡಿರುವ ವೆಂಕಯ್ಯ ನಾಯ್ಡು ಅವರ ಬಗ್ಗೆ ಅಪಾರ ಗೌರವಿದೆ. ಆದರೆ, ಅವರ ಈ ಹೇಳಿಕೆ ರೈತರಿಗೆ ಅವಮಾನಿಸಿದೆ. ವೈಯಕ್ತಿಕವಾಗಿ ತಮಗೂ ಕೂಡ ನೋವು ತಂದಿದೆ. ಹೀಗಾ ಅವರೇಕೆ ಹೀಗೆ ಮಾತನಾಡಿದರೋ ಗೊತ್ತಾಗಲಿಲ್ಲ ಎಂದರು.

> **“ ಡೈರಿಯಲ್ಲಿ ನಂಬಿಕೆ ಇಲ್ಲ**
>
> **ಗೋವಿಂದರಾಜು**
>
> **ಡೈರಿಗೆ ಹೆಚ್ಚು ಮಹತ್ವ ಬೇಡ. ಡೈರಿಯಲ್ಲಿ ನನಗೆ ನಂಬಿಕೆ ಇಲ್ಲ. ಎಲ್ಲವೂ ನನ್ನ ತಲೆಯಲ್ಲಿ ಇದೆ. ನಾನು ಡೈರಿ ಬರೆಯಲ್ಲ. ಹೀಗಾಗಿ ಈ ಬಗ್ಗೆ ಪ್ರತಿಕ್ರಿಯೆ ನೀಡಲ್ಲ. ರೈತರ ವಿಷಯದಲ್ಲಿ ವೆಂಕಯ್ಯ ನಾಡು ಹೇಳಿಕೆ ಖಂಡನೀಯ.**
>
> ■ ಆರ್.ವಿ. ದೇಶಪಾಂಡೆ, ಬೃಹತ್ ಕೈಗಾರಿಕೆ ಸಚಿವ

ಮನಮೋಹನಸಿಂಗ್ ಪ್ರಧಾನಮಂತ್ರಿ ಇದ್ದಾಗ 72 ಸಾವಿರ ಕೋಟಿ ರೈತರ ಸಾಲಮನ್ನಾಮಾಡಿದ್ದರು. ಕೇಂದ್ರಸರ್ಕಾರ ಕಾರ್ಪೋರೇಟ್ ಕಂಪನಿಗಳ ಸಾಲಮನ್ನಾ ಮಾಡುತ್ತದೆ. ರೈತರ ಸಾಲಮನ್ನಾ ಮಾಡಲು ಮೀನಮೇಷ ಮಾಡುತ್ತಿದೆ. ರೈತರ ಬಗ್ಗೆ ಬದ್ಧತೆ ಇರೋದಾದರೆ, ರಾಷ್ಟ್ರೀಕೃತ ಬಾಂಕ್‌ಗಳ ಸಾಲಮನ್ನಾ ಮಾಡಲಿ ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಗಣಿ-ಭೂ ವಿಜ್ಞಾನ ಸಚಿವ ವಿನಯ ಕುಲಕರ್ಣಿ, ಟಾಟಾ ಹಿಟಾಚ್ ತರಬೇತಿ ಕೇಂದ್ರದ ವ್ಯವಸ್ಥಾಪಕ ನಿರ್ದೇಶಕ ಸಂದೀಪಸಿಂಗ್, ಕೇಂದ್ರದ ಮುಖ್ಯಸ್ಥ ಎಸ್.ಉಮಾಪತಿ, ಟಾಟಾ ಹಿಟಾಚ್ ತರಬೇತಿ ಕೇಂದ್ರದ ಸಿಬ್ಬಂದಿ ಸೇರಿದಂತೆ ಅನೇಕರು ಇದ್ದರು.

### ಬೃಹತ್ ಕೈಗಾರಿಕಾ ಸಚಿವ ಆರ್.ವಿ. ದೇಶಪಾಂಡೆ ಹೇಳಿಕೆ

## ಜಿಮ್ ಆಯೋಜನೆ ವಿಚಾರ ಇಲ್ಲ

▸ ದಿಗಂತ ವರದಿ: ಧಾರವಾಡ, ಜೂ. 23

ದಿಗಂತ ಚಿತ್ರ



ಯುವಕ-ಯುವತಿಯರಿಗೆ ಉದ್ಯೋಗ ಸೃಷ್ಟಿಯಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ. ಸದ್ಯಕ್ಕೆ ರಾಜ್ಯ ಸರ್ಕಾರ ಜಾಗತಿಕ ಹೂಡಿಕೆದಾರರ ಸಮಾವೇಶ (ಜಿಮ್) ಆಯೋಜಿಸುವ ವಿಚಾರ ನಮ್ಮ ಮುಂದೆ ಇಲ್ಲ ಎಂದು ಬೃಹತ್ ಕೈಗಾರಿಕಾ ಸಚಿವ ಆರ್.ವಿ. ದೇಶಪಾಂಡೆ ತಿಳಿಸಿದರು.

ಇಲ್ಲಿನ ಬೇಲೂರು ಕೈಗಾರಿಕಾ ಪ್ರದೇಶದಲ್ಲಿನೂತನವಾಗಿಆರಂಭಗೊಂಡ ಟಾಟಾ ಹಿಟ್ಯಾಚ್ ತರಬೇತಿ ಕೇಂದ್ರ ಉದ್ಘಾಟಿಸಿ ಮಾತನಾಡಿದ ಅವರು, 2015ರಲ್ಲಿ ರಾಜ್ಯ ಸರ್ಕಾರದಿಂದ ಬೆಂಗಳೂರಿನಲ್ಲಿ ಅತ್ಯಂತ ಯಶಸ್ವಿಯಾಗಿ ಹೂಡಿಕೆದಾರರ ಸಮಾವೇಶ ಏರ್ಪಡಿಸಿತ್ತು ಎಂದರು. ಈಗ ಅದರ ಪ್ರತಿಫಲ ದೊರೆಯುತ್ತಿದೆ.

ಆದರೆ, ಮತ್ತೆ ಅಂಥ ಹೂಡಿಕೆದಾರರ ಸಮಾವೇಶ ಏರ್ಪಡಿಸುವ ಇರಾದೆ ನಮ್ಮ ಮುಂದಿಲ್ಲ. ಅದರ ಬದಲಿಗೆ, ಸಣ್ಣ ಮತ್ತು ಮಧ್ಯಮ ಕೈಗಾರಿಕೆ ಉತ್ತೇಜಿಸಲು ಹೂಡಿಕೆ ಸಮಾವೇಶ ಆಯೋಜಿಸುವ ವಿಚಾರ ಇದೆ ಎಂದರು.

ತರಬೇತಿ ಅವಧಿ 21 ದಿನಗಳಾಗಿದ್ದು, ಬಕೆಟ್ ಹೊಂದಿಸುವುದು, ಚೆಂಡ್ ಹಾಕುವುದು ಸೇರಿದಂತೆ ಮೂರು ಹಂತದಲ್ಲಿ ತರಬೇತಿ ನೀಡಲಾಗುತ್ತಿದೆ. ಈಗಾಗಲೇ ಎಸ್ಸೆಸ್ಸೆಲ್ಸಿ ಓದಿರುವ ಸುಮಾರು 400 ಅಭ್ಯರ್ಥಿಗಳು ತರಬೇತಿ ನೋಂದಣಿ ಮಾಡಿಸಿಕೊಂಡಿದ್ದಾರೆ ಎಂದು ಕೇಂದ್ರದ ಮುಖ್ಯಸ್ಥ ಉಮಾಪತಿ ತಿಳಿಸಿದರು. ಟಾಟಾ ಹಿಟ್ಯಾಚ್ ಕಂಪನಿ ಹುಬ್ಬಳ್ಳಿ-ಬೆಂಗಳೂರಲ್ಲಿ ಕೇಂದ್ರ ಕಚೇರಿ ಹೊಂದಿದ್ದು, ಧಾರವಾಡ, ಹಾವೇರಿ, ಬೆಳಗಾವಿ, ಚಿತ್ರದುರ್ಗ ಸೇರಿದಂತೆ ರಾಜ್ಯದ ವಿವಿಧೆಡೆಗೆ ಶಾಖಾ ಕಚೇರಿಗಳನ್ನು ಹೊಂದಿದೆ. ಒಂದು ಹಿಟ್ಯಾಚ್ 6-7 ಟನ್ ತೂಕ ಹೊಂದಿರಲಿದೆ ಎಂದರು. ಕೇಂದ್ರದಲ್ಲಿ ಮೇಲ್ವಿಚಾರಕರು, ಮಷಿನ್ ಆಪರೇಟರ್ ಹಾಗೂ ತರಬೇತಿ ಕೌಶಲ್ಯ ಮೂರು ವಿಭಾಗಗಳಿವೆ. ಒಟ್ಟು 500 ಜನ ಸಿಬ್ಬಂದಿ ಇದ್ದಾರೆ. ಆವರಣದಲ್ಲಿ ಕೆರೆ ಇದ್ದು, ಆ ನೀರೇ ಕೈಗಾರಿಕೆಗೆ ಬಳಕೆ ಮಾಡಲಾಗುತ್ತಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ವಿನಯ ಕುಲಕರ್ಣಿ, ಟಾಟಾ ಹಿಟಾಚಿ ಕಂಪನಿ ವ್ಯವಸ್ಥಾಪಕ ನಿರ್ದೇಶಕ ಸಂದೀಪಸಿಂಗ್, ಕೇಂದ್ರದ ಮುಖ್ಯಸ್ಥ ಎಸ್.ಉಮಾಪತಿ ಸೇರಿದಂತೆ ಅನೇಕರು ಇದ್ದರು.

# ಇನ್ನಾರು ತಿಂಗಳಲ್ಲಿ ಕೈಗಾರಿಕಾ ಹೂಡಿಕೆದಾರರ ಸಮಾವೇಶ

## ಟಾಟಾ ಹಿಟಾಚಿ ಆಪರೇಟರ್ ತರಬೇತಿ ಕೇಂದ್ರ ಉದ್ಘಾಟನಾ ಕಾರ್ಯಕ್ರಮದಲ್ಲಿ ಸಚಿವ ಆರ್.ವಿ

• **ಕನ್ನಡಪ್ರಭ ವಾರ್ತೆ** ಧಾರವಾಡ

ರಾಜ್ಯದಲ್ಲಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಉತ್ತೇಜನಕ್ಕಾಗಿ ಸದ್ಯದಲ್ಲಿಯೇ ಹೂಡಿಕೆದಾರರ ಸಮಾವೇಶ ಮಾಡಲಾಗುವುದು ಎಂದು ಬೃಹತ್, ಮಧ್ಯಮ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯಗಳ ಸಚಿವ ಆರ್.ವಿ. ದೇಶಪಾಂಡೆ ಹೇಳಿದರು.

ಇಲ್ಲಿನ ಬೇಲೂರು ಕೈಗಾರಿಕಾ ಪ್ರದೇಶದಲ್ಲಿನ ಟಾಟಾ ಹಿಟಾಚಿ ಆಪರೇಟರ್ ತರಬೇತಿ ಕೇಂದ್ರವನ್ನು ಶುಕ್ರವಾರ ಉದ್ಘಾಟಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಾಗಲೇ ಜಾಗತಿಕ ಹೂಡಿಕೆದಾರರ ಸಮಾವೇಶ ನಡೆಸಿದ್ದು ಯಶಸ್ವಿಯಾಗಿದೆ. ಅದರ ಫಲವಾಗಿ ತುಮಕೂರು, ಮೈಸೂರು, ಕಲಬುರಗಿ, ಯಾದಗಿರಿ, ಧಾರವಾಡ ಸೇರಿದಂತೆ ರಾಜ್ಯದ ವಿವಿಧೆಡೆ ಕೈಗಾರಿಕಾ ಕಂಪನಿಗಳು ಬರುತ್ತಿವೆ. ಇದರೊಂದಿಗೆ ಮುಂದಿನ ಅಕ್ಟೋಬರ್ ಅಥವಾ ನವೆಂಬರ್ ತಿಂಗಳಲ್ಲಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ನಿರ್ಮಾಣಕ್ಕೆ ಹೂಡಿಕೆದಾರರ ಸಮಾವೇಶದ ಸಿದ್ಧತೆ ನಡೆಸುತ್ತಿದ್ದೇವೆ ಎಂದರು.

ಈ ಮೊದಲು ಕೈಗಾರಿಕಾ ಬಂಡವಾಳಗಾರರು ತಾವಾಗಿಯೇ ಬರುತ್ತಿದ್ದರು. ಆದರೆ, ಪರಿಸ್ಥಿತಿ ಬದಲಾಗಿದ್ದು ನಾವೇ ಅವರತ್ತ ಧಾವಿಸಬೇಕಿದೆ. ಕೈಗಾರಿಕೋದ್ಯಮಿಗಳನ್ನು ಆಕರ್ಷಿಸಲು ರಾಜ್ಯ ಸರ್ಕಾರ ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಿದ್ದು, ಈ ಮೂಲಕ ರಾಜ್ಯದಲ್ಲಿ ಸಾಕಷ್ಟು ಕಂಪನಿಗಳು ಬರಲು ಆಸಕ್ತಿ ತೋರುತ್ತಿವೆ. ಈ ಮೂಲಕ ಸ್ಥಳೀಯ ಯುವಕರಿಗೆ ಉದ್ಯೋಗ ದೊರಕಿಸುವ ಚಿಂತನೆಯೂ ಇದೆ ಎಂದ ಸಚಿವರು, ಆಂಧ್ರ, ತೆಲಂಗಾಣ, ಮಹಾರಾಷ್ಟ್ರ, ತಮಿಳುನಾಡು ರಾಜ್ಯಗಳಲ್ಲಿನ ನಿರುದ್ಯೋಗ ಸಮಸ್ಯೆಗಳಿಗೆ ಹೋಲಿಸಿದರೆ ರಾಜ್ಯದಲ್ಲಿ ಅಷ್ಟೊಂದು ಪ್ರಮಾಣದಲ್ಲಿಲ್ಲ. ರಾಜ್ಯದ ಆಸಕ್ತ ಯುವಕ-ಯುವತಿಯರಿಗೆ ಕೌಶಲ್ಯ ಅಭಿವೃದ್ಧಿ ತರಬೇತಿಯೊಂದಿಗೆ ರಾಜ್ಯದಲ್ಲಿ ಈ ವರ್ಷ 5 ಲಕ್ಷ ಉದ್ಯೋಗ ನೀಡಲು ರಾಜ್ಯ ಸರ್ಕಾರ ತೀರ್ಮಾನಿಸಿದೆ ಎಂದರು.

ಬರುವ ಜುಲೈ ತಿಂಗಳಿಂದ ದೇಶದಲ್ಲಿ ಜಾರಿಯಾಗುವ ಜಿಎಸ್‌ಟಿ ಕುರಿತು ಮಾತನಾಡಿದ ಸಚಿವರು, ಜಿಎಸ್‌ಟಿ ಮೂಲಕ ಒಂದೇ ರಾಷ್ಟ್ರ, ಒಂದೇ ತೆರಿಗೆ ನೀತಿಗೆ ತಮ್ಮ ಸ್ವಾಗತವಿದೆ. ಆದರೆ, ಟ್ರ್ಯಾಕ್ಟರ್ ಬಿಡಿಭಾಗಗಳಿಗೆ, ಕೃಷಿಯಂತ್ರೋಪಕರಣ ಹಾಗೂ ಕೃಷಿ ಪರಿಕರಗಳ ಮೇಲೂ ಜಿಎಸ್‌ಟಿ ಹೇರಲಾಗುತ್ತಿದ್ದು ಇದು ರೈತರಿಗೆ ಹೊರೆಯಾಗಲಿದೆ. ಇದನ್ನು ಕೇಂದ್ರಕ್ಕೆ ತಿಳಿಸಲು ರಾಜ್ಯ ಕೃಷಿ ಸಚಿವ ಕೃಷ್ಣಭೈರೇಗೌಡ ದೆಹಲಿಗೆ ತೆರಳಿ ಮನವರಿಕೆ ಮಾಡಲಿದ್ದಾರೆ ಎಂದರು.

ಇತ್ತೀಚೆಗೆ ರೈತರ ಸಾಲ ಮನ್ನಾ ಫ್ಯಾಶನ್ ಆಗಿದೆ ಎಂದು ಹೇಳಿಕೆ ನೀಡಿರುವ ಕೇಂದ್ರ ನಗರಾಭಿವೃದ್ಧಿ ಸಚಿವ ಎಂ. ವೆಂಕಯ್ಯನಾಯ್ಡು ಅವರ ಹೇಳಿಕೆಯನ್ನು ತೀವ್ರವಾಗಿ ಖಂಡಿಸಿದ ಸಚಿವರು, ಜವಾಬ್ದಾರಿಯುತ ಸ್ಥಾನದಲ್ಲಿದ್ದು ಈ ರೀತಿ ಹೇಳಿಕೆ ನೀಡುವುದು ಸರಿಯಲ್ಲ. ಇದು ರೈತರ ಮೇಲಿನ ಅಗೌರವ ತೋರುತ್ತದೆ. ರೈತರ ನೆರವಿಗೆ ಬರುವುದು ಮುಖ್ಯಮಂತ್ರಿಗಳ ಕರ್ತವ್ಯ. ಅದನ್ನು ಅವರು ನಿಭಾಯಿಸಿದ್ದಾರೆ. ಅದೇ ರೀತಿ ಕೇಂದ್ರ ಸರ್ಕಾರವು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿನ ರೈತರ ಸಾಲ ಮನ್ನಾ ಮಾಡುವ ಮೂಲಕ ತನ್ನ ಬದ್ಧತೆ ತೋರಿಸಬೇಕಿದೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ವಿನಯ ಕುಲಕರ್ಣಿ, ಟಾಟಾ ಹಿಟಾಚಿ ವ್ಯವಸ್ಥಾಪಕ ನಿರ್ದೇಶಕ ಸಂದೀಪ ಸಿಂಗ್, ಧಾರವಾಡ ಘಟಕದ ವ್ಯವಸ್ಥಾಪಕ ಎಸ್. ಉಮಾಪತಿ ಹಾಗೂ ಅಜಿತ ಕುಲಕರ್ಣಿ ಇದ್ದರು.

KP




ಧಾರವಾಡದ ಬೇಲೂರು ಕೈಗಾರಿಕಾ ಪ್ರದೇಶದಲ್ಲಿನ ಟಾಟಾ ಹಿಟಾಚಿ ಆಪರೇಟರ್ ತರಬೇತಿ ಕೇಂದ್ರವನ್ನು ಶುಕ್ರವಾರ ಸಚಿವ ಆರ್.ವಿ. ದೇಶಪಾಂಡೆ ಉದ್ಘಾಟಿಸಿದರು. ಟಾಟಾ ಹಿಟಾಚಿ ಕಂಪನಿ ವ್ಯವಸ್ಥಾಪಕ ನಿರ್ದೇಶಕ ಸಂದೀಪ ಸಿಂಗ್ ಇದ್ದಾರೆ.

## ಅಳ್ನಾವರ, ಹಳಿಯಾಳಕ್ಕೆ ಬರಲಿದೆ ಕಾಳಿ ನದಿ ನೀರು

**ಧಾರವಾಡ:** ಅಳ್ನಾವರ ಪಟ್ಟಣಕ್ಕೆ ಕುಡಿಯುವ ನೀರು ಒದಗಿಸುವ ಕಾಳಿ ನದಿ ನೀರು ಯೋಜನೆಗೆ ಸಚಿವ ಸಂಪುಟ ಒಪ್ಪಿಗೆ ಸೂಚಿಸಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಆರ್.ವಿ. ದೇಶಪಾಂಡೆ ಹೇಳಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸಚಿವ ಸಂಪುಟ ಗುರುವಾರ ಎರಡು ಮಹತ್ವದ ನಿರ್ಧಾರಗಳನ್ನು ತೆಗೆದುಕೊಂಡಿದೆ. ಹಳಿಯಾಳದ 14 ಹಳ್ಳಿಗಳ ಮೇಲೆ ಹಾದು ಹೋಗುವ ಅಳ್ನಾವರ ಪಟ್ಟಣಕ್ಕೆ ನೀರು ಒದಗಿಸುವ ₹ 72 ಕೋಟಿ ವೆಚ್ಚದ ಕಾಳಿ ನದಿ ನೀರು ಯೋಜನೆ ಹಾಗೂ ಕಾಳಿ ನದಿ ನೀರಿನಿಂದ ಹಳಿಯಾಳ ತಾಲೂಕಿನ ರೈತರಿಗೆ ನೀರಾವರಿ ಒದಗಿಸುವ ₹ 220 ಕೋಟಿ ಯೋಜನೆಗೆ ಒಪ್ಪಿಗೆ ದೊರಕಿದೆ. ಈ ಯೋಜನೆ ಮೂಲಕ ಹಳಿಯಾಳದ 15-20 ಸಾವಿರ ಹೆಕ್ಟೇರ್ ಪ್ರದೇಶ ನೀರಾವರಿಗೆ ಒಳಪಡಲಿದೆ ಎಂಬ ಮಾಹಿತಿಯನ್ನು ಸಚಿವರು ತಿಳಿಸಿದರು.

## ನನ್ನ ತಲೆಯೇ ಡೈರಿ..

ಕಾಂಗ್ರೆಸ್‌ನ ವಿಪ ಸದಸ್ಯ ಕೆ. ಗೋವಿಂದರಾಜು ಅವರ ಡೈರಿ ವಿಚಾರವಾಗಿ ಸುದ್ದಿಗಾರರ ಪ್ರಶ್ನೆಗೆ ಸಚಿವ ಆರ್.ವಿ. ದೇಶಪಾಂಡೆ, ನೋಡಿ ಡೈರಿ ವಿಷಯ ನನಗೆ ಗೊತ್ತಿಲ್ಲ. ನಾನು ಯಾವ ಡೈರಿ ಇಟ್ಟಿಲ್ಲ. ನನ್ನ ತಲೆಯೇ ಡೈರಿ. ಎಲ್ಲವೂ ಅದರಲ್ಲಿಯೇ ಸಂಗ್ರಹವಾಗಿರುತ್ತದೆ. ಗೋವಿಂದರಾಜ ಅವರ ಡೈರಿ ಪ್ರಕರಣ ಮುಗಿದಿದ್ದು, ಈ ಬಗ್ಗೆ ಮಾಧ್ಯಮಗಳು ಹೆಚ್ಚಿನ ಪ್ರಸ್ತಾಪ ಮಾಡಬಾರದು ಎಂದಷ್ಟೇ ಉತ್ತರಿಸಿದರು.

## ಆಪರೇಟರ್ ತರಬೇತಿ ಕೇಂದ್ರ ಉದ್ಘಾಟನೆ ಕಾರ್ಯಕ್ರಮದಲ್ಲಿ ಸಚಿವ ಆರ್.ವಿ.ದೇಶಪಾಂಡೆ ಹೇಳಿಕೆ

# ಕಂಪೆನಿ ಆಯ್ಕೆಯಂತೆ ಕೈಗಾರಿಕಾ ಪ್ರದೇಶ ಅಭಿವೃದ್ಧಿ

ಪ್ರಜಾವಾಣಿ ವಾರ್ತೆ

ಧಾರವಾಡ: 'ಕೈಗಾರಿಕೆಗಳು ಮಾತ್ರ ತಮ್ಮ ಅನುಕೂಲಕ್ಕೆ ತಕ್ಕಂತಹ ಸ್ಥಳವನ್ನೇ ಆಯ್ಕೆ ಮಾಡಿಕೊಳ್ಳುತ್ತಿರುವುದರಿಂದ ರಾಜ್ಯದ ಎಲ್ಲಾ ಭಾಗಗಳಲ್ಲೂ ಸಮನಾಗಿ ಕೈಗಾರಿಕೆಗಳು ಬೆಳೆಯುತ್ತಿಲ್ಲ' ಎಂದು ಬೃಹತ್, ಮಧ್ಯಮ ಕೈಗಾರಿಕೆ ಹಾಗೂ ಮೂಲ ಸೌಕರ್ಯಗಳ ಅಭಿವೃದ್ಧಿ ಸಚಿವ ಆರ್.ವಿ. ದೇಶಪಾಂಡೆ ಆತಂಕ ವ್ಯಕ್ತಪಡಿಸಿದರು.

ಇಲ್ಲಿನ ಬೇಲೂರು ಕೈಗಾರಿಕಾ ಪ್ರದೇಶದಲ್ಲಿ ಟಾಟಾ ಹಿಟಾಚಿ ಪ್ರಾರಂಭಿಸಿರುವ ಆಪರೇಟರ್ ತರಬೇತಿ ಕೇಂದ್ರವನ್ನು ಶುಕ್ರವಾರ ಉದ್ಘಾಟಿಸಿ ಅವರು ಮಾತನಾಡಿದರು.

'2025ರ ಹೊತ್ತಿಗೆ ಭಾರತದಲ್ಲಿನ ಒಟ್ಟು ಜನಸಂಖ್ಯೆಯ ಶೇ 65ರಷ್ಟು ಯುವಕರೇ ತುಂಬಿರುತ್ತಾರೆ ಎಂದು ಅಂದಾಜಿಸಲಾಗಿದೆ. ಅಷ್ಟು ಯುವಕರಿಗೆ ಉದ್ಯೋಗ ಸೃಷ್ಟಿಸುವುದು ಸರ್ಕಾರಗಳಿಗೆ ಸವಾಲಿನ ಕೆಲಸ. ಅದಕ್ಕೆ ರಾಜ್ಯದ ಎಲ್ಲಾ ಭಾಗಗಳಲ್ಲೂ ಕೈಗಾರಿಕೆಗಳು ಸಮನಾಗಿ ಬೆಳೆಯಬೇಕು ಎಂಬುದು ಸರ್ಕಾರದ ಆಶಯ. ಆದರೆ ಕೈಗಾರಿಕೋದ್ಯಮಿಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ಸ್ಥಳಗಳನ್ನು ಆಯ್ಕೆ ಮಾಡಿಕೊಳ್ಳುತ್ತಿರುವುದರಿಂದ ಬೆಂಗಳೂರು, ತುಮಕೂರು, ಹುಬ್ಬಳ್ಳಿ-ಧಾರವಾಡ, ಬೆಳಗಾವಿಯಂಥ ಪ್ರದೇಶಗಳಲ್ಲಿ ಮಾತ್ರ ಕೈಗಾರಿಕೆಗಳು ಬೆಳೆದಿವೆ ಎಂದರು.



ಧಾರವಾಡದ ಬೇಲೂರು ಕೈಗಾರಿಕಾ ಪ್ರದೇಶದಲ್ಲಿ ಟಾಟಾ ಹಿಟಾಚಿ ಪ್ರಾರಂಭಿಸಿದ ಆಪರೇಟರ್ ತರಬೇತಿ ಕೇಂದ್ರವನ್ನು ಉದ್ಘಾಟಿಸಿದ ಸಂದರ್ಭದಲ್ಲಿ ಸ್ವತಃ ತರಬೇತಿಯ ಬಗ್ಗೆ ಸಚಿವ ಆರ್.ವಿ. ದೇಶಪಾಂಡೆ ಮಾಹಿತಿ ಪಡೆದರು. ವಿನಯ ಕುಲಕರ್ಣಿ, ಸಂದೀಪ ಸಿಂಗ್ ಮತ್ತಿತರರು ಇದ್ದಾರೆ

'ಬೇಲೂರು ಕೈಗಾರಿಕಾ ಪ್ರದೇಶದಲ್ಲಿನ ಮೂಲ ಸೌಕರ್ಯ ಹೆಚ್ಚಳಕ್ಕೆ ₹ 18ಕೋಟಿ ಬಿಡುಗಡೆ ಮಾಡಲಾಗಿದೆ. ಹುಬ್ಬಳ್ಳಿ ವಿಮಾನ ನಿಲ್ದಾಣದ ಕಾಮಗಾರಿ ಸಂಪೂರ್ಣ ಮುಗಿದಿದ್ದು, ವಿಮಾನಯಾನ ಸಂಸ್ಥೆಗಳೊಂದಿಗೆ ಮಾತುಕತೆ ನಡೆಸಲಾಗಿದೆ. ವಿಮಾನ ಹಾರಾಟಕ್ಕೆ ಸಂಬಂಧಿಸಿದಂತೆ ಕೇಂದ್ರ ವಿಮಾನಯಾನ ಸಚಿವಾಲಯವು ಕ್ರಮ ಕೈಗೊಳ್ಳಬೇಕಿದೆ' ಎಂದರು.

'ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರವು ಅಧಿಕಾರ ವಹಿಸಿಕೊಂಡ ಸಂದರ್ಭದಲ್ಲಿ 1ಕೋಟಿ ಉದ್ಯೋಗ ಸೃಷ್ಟಿಸುತ್ತೇವೆ ಎಂದು ಭರವಸೆ ನೀಡಿದ್ದರು. ಆದರೆ, ಈವರೆಗೂ ಅದು ಸಾಧ್ಯವಾಗಿಲ್ಲ. ದೇಶದಲ್ಲೇ ಕರ್ನಾಟಕ ಕಡಿಮೆ ನಿರುದ್ಯೋಗ ಸಮಸ್ಯೆ (ಶೇ 1.4)ಹೊಂದಿದೆ. ಬಂಡವಾಳ ಹೂಡಲು ಕಂಪೆನಿಗಳು ಕರ್ನಾಟಕವನ್ನೇ ಆಯ್ಕೆ ಮಾಡಿಕೊಳ್ಳುತ್ತಿರುವುದರಿಂದ ಯುವಕರಲ್ಲಿ ಕೌಶಲ ಹೆಚ್ಚಿಸುವ ಕಾರ್ಯ ಮಾಡಬೇಕಾಗಿದೆ' ಎಂದರು.

'ಜಿಎಸ್‌ಟಿ ಜಾರಿಗೆ ಬರುತ್ತಿರುವುದರಿಂದ ಸಾಕಷ್ಟು ಅನುಕೂಲವಾಗಲಿದೆ. ಇದನ್ನು ರಾಜ್ಯ ಸರ್ಕಾರ ಸ್ವಾಗತಿಸಿದೆ. ಆದರೆ, ಇಂಧನ ಸಮಸ್ಯೆಗೆ ಪರ್ಯಾಯವಾಗಿರುವ ಹೈಬ್ರಿಡ್ ವಾಹನಗಳ ಮೇಲಿನ ಸುಂಕವನ್ನು ಹೆಚ್ಚಿಸಬೇಡಿ ಎಂದು ಕೋರಿದ್ದರೂ ಕೇಂದ್ರ ಅದನ್ನು ಪುರಸ್ಕರಿಸಿಲ್ಲ. ಜತೆಗೆ ಟ್ರ್ಯಾಕ್ಟರ್ ಬಿಡಿಭಾಗಗಳ ಮೇಲಿನ ತೆರಿಗೆಯನ್ನೂ ಹೆಚ್ಚಿಸಿದ್ದರಿಂದ ಕೃಷಿಕರಿಗೆ ಹೆಚ್ಚಿನ ಹೊರ ಬೀಳಲಿದೆ. ಇದು ಕೇಂದ್ರಕ್ಕೂ ಮನವರಿಕೆಯಾಗಿದ್ದು, ಹೇಗೆ ಪ್ರತಿಕ್ರಿಯಿಸುತ್ತದೆ ಎಂಬುದನ್ನು ಕಾದುನೋಡಬೇಕು' ಎಂದು ದೇಶಪಾಂಡೆ ಹೇಳಿದರು.

**ಟಾಟಾ ಹಿಟಾಚಿಯಿಂದ ತರಬೇತಿ**

'ಟಾಟಾ ಹಿಟಾಚಿ ಕಂಪೆನಿ ವರ್ಷಕ್ಕೆ 950 ಜನರಿಗೆ ಆಪರೇಟರ್ ತರಬೇತಿ ನೀಡುವ ಉದ್ದೇಶ ಹೊಂದಿದೆ. ಇಲ್ಲಿ ಸ್ಥಳೀಯರಿಗೆ ಹಾಗೂ ಕೈಗಾರಿಕೆಗಳಿಗಾಗಿ ಭೂಮಿ ಕಳೆದುಕೊಂಡ ಕುಟುಂಬದ ವಿದ್ಯಾವಂತ ಯುವಕರಿಗೆ ತರಬೇತಿ ನೀಡುವಂತೆ ಕೋರಲಾಗಿದೆ' ಎಂದು ದೇಶಪಾಂಡೆ ತಿಳಿಸಿದರು.

'ಇಲ್ಲಿ ಬೇಲೂರು ಕೈಗಾರಿಕಾ ಪ್ರದೇಶದಲ್ಲಿನ 8 ಎಕರೆ ಪ್ರದೇಶದಲ್ಲಿ ಆಪರೇಟರ್ ತರಬೇತಿ ಕೇಂದ್ರ ಸ್ಥಾಪನೆಯ ಮೂಲಕ ರಾಜ್ಯದ ಆಸಕ್ತ ಯುವಕರಿಗೆ ಯಂತ್ರಗಳ ಆಪರೇಟರ್ ತರಬೇತಿ ನೀಡುವ ಉದ್ದೇಶವನ್ನು ಕಂಪೆನಿ ಹೊಂದಿದೆ' ಎಂದು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಸಂದೀಪ ಸಿಂಗ್ ತಿಳಿಸಿದರು.

'ಎನ್‌ಎಸ್‌ಡಿಸಿ ಹಾಗೂ ಐಇಎಸ್‌ಸಿ ಮಾರ್ಗಸೂಚಿಯಂತೆ ಆಪರೇಟರ್ ಅನುಭವ ಇರುವವರ ಕೌಶಲವನ್ನು ಹೆಚ್ಚಿಸುವುದು ಹಾಗೂ ಹೊಸದಾಗಿ ಕಲಿಯಲಿಚ್ಛಿಸುವವರಿಗೆ ಸೂಕ್ತ ಮಾರ್ಗದರ್ಶನ ನೀಡಲಾಗುವುದು. ಕಂಪೆನಿಯ ಉದ್ಯೋಗಿಗಳಿಗೆ ಅವರ ವೃತ್ತಿ ಕೌಶಲವನ್ನು ಮತ್ತಷ್ಟು ಹೆಚ್ಚಿಸಿಕೊಳ್ಳುವ ಸಲುವಾಗಿ ಕೇಂದ್ರವನ್ನು ಬಳಸಿಕೊಳ್ಳಲಾಗುವುದು' ಎಂದು ಹೇಳಿದರು.

ಕಂಪೆನಿಯ ಹಿರಿಯ ಅಧಿಕಾರಿ ಉಮಾಪತಿ ಇದ್ದರು.

## ಹೆಚ್ಚಿನ ಪರಿಹಾರಕ್ಕೆ ಒತ್ತಾಯ

ಕೈಗಾರಿಕೆಗಳಿಗೆ ಜಮೀನು ಪಡೆಯುತ್ತಿರುವ ಜಿಲ್ಲಾಡಳಿತ ಪರಿಹಾರ ಮೊತ್ತವನ್ನು ₹30ಲಕ್ಷದಿಂದ ₹40ಲಕ್ಷಕ್ಕೆ ಹೆಚ್ಚಿಸಬೇಕು ಎಂದು ಬೇಲೂರು ಗ್ರಾಮಸ್ಥರು ಸಚಿವ ಆರ್.ವಿ. ದೇಶಪಾಂಡೆ ಅವರಿಗೆ ಒತ್ತಾಯಿಸಿದರು.

'ಕರ್ನಾಟಕ ಕೈಗಾರಿಕೆ ಪ್ರದೇಶ ಅಭಿವೃದ್ಧಿ ಮಂಡಳಿಯು 2007ರಲ್ಲೇ ಇಲ್ಲಿನ ರೈತರ ಹೊಲಗಳನ್ನು ಭೂಸ್ವಾಧೀನಪಡಿಸಿಕೊಳ್ಳುವ ನಿಟ್ಟಿನಲ್ಲಿ ಅಂತಿಮ ಅಧಿಸೂಚನೆ ಹೊರಡಿಸಿತ್ತು. ಆದರೆ, ಇದಕ್ಕೆ ರೈತರು ಒಪ್ಪಿರಲಿಲ್ಲ. ಈಗ ಪ್ರತಿ ಎಕರೆಗೆ ₹ 30ಲಕ್ಷ ನೀಡುವುದಾಗಿ ಹೇಳುತ್ತಿದ್ದಾರೆ. ಈ ಹಿಂದಿನ ಜಿಲ್ಲಾಧಿಕಾರಿ ಹಾಗೂ ಸಚಿವ ವಿನಯ ಕುಲಕರ್ಣಿ ಅವರು ₹40ಲಕ್ಷ ಕೊಡಿಸುವ ಭರವಸೆ ನೀಡಿದ್ದರು. ಅದನ್ನೇ ಈಗಿನ ಜಿಲ್ಲಾಧಿಕಾರಿಗೆ ಆದೇಶಿಸಿ' ಎಂದು ರೈತರು ಪಟ್ಟು ಹಿಡಿದರು.

ಈ ಕುರಿತಂತೆ ಜಿಲ್ಲಾಧಿಕಾರಿಯೊಂದಿಗೆ ಮಾತನಾಡುವುದಾಗಿ ತಿಳಿಸಿದ ದೇಶಪಾಂಡೆ, 'ಜಮೀನು ಕಳೆದುಕೊಂಡ ರೈತರ ಕುಟುಂಬದಲ್ಲಿ ಐಟಿಐ, ಡಿಪ್ಲೊಮಾ, ಎಸ್ಸೆಸ್ಸೆಲ್ಸಿ, ಪಿಯುಸಿ ಮುಗಿಸಿರುವ ಯುವಕರ ಪಟ್ಟಿ ಸಿದ್ಧಪಡಿಸುವಂತೆ ರೈತರಿಗೆ ಸಲಹೆ ನೀಡಿದರು. ಅವರಿಗೆ ಕೌಶಲ್ಯ ಅಭಿವೃದ್ಧಿ ತರಬೇತಿ ಕೊಡಿಸಲಾಗುವುದು ಎಂದು ಭರವಸೆ ನೀಡಿದರು.

उद्योग मंत्री आर.वी. देशपांडे ने की घोषणा

# अक्टूबर में होगा निवेशकों का सम्मेलन





## टाटा हिटाची प्रशिक्षण केन्द्र का उद्घाटन

पत्रिका न्यूज़ नेटवर्क
rajasthanpatrika.com

**धारवाड़.** उद्योग मंत्री आर.वी. देशपांडे ने कहा है कि सरकार ने राज्य में लघु तथा मध्यम उद्योगों के विकास के लिए आगामी अक्टूबर माह में निवेशकों के सम्मेलन का आयोजन करेगी। वे धारवाड़ में शुक्रवार को निकटवर्ती बेलूर औद्योगिक क्षेत्र में टाटा हिटाची प्रशिक्षण केन्द्र का उद्घाटन करने के पश्चात पत्रकारों से बातचीत कर रहे थे। उन्होंने कहा कि इससे पहले सरकार की ओर से आयोजित वैश्विक निवेशकों का सम्मेलन सफल हुआ है। सम्मेलन से 1.77 लाख करोड़ पूंजी निवेश करने के लिए कम्पनियां आगे आई हैं। तुमकुरु, मैसूरु, कलबुर्गी, यादगिरी, धारवाड़ समेत राज्य के विविध इलाकों में औद्योगिक कम्पनियां स्थापित किए जा रही हैं। इस दिशा में आगामी अक्टूबर में लघु एवं मध्यम उद्योगों की स्थापना के लिए निवेशकों के सम्मेलन के आयोजन करने की तैयारियां की जा रही हैं।

### स्थानीय युवकों को देंगे रोजगार

देशपांडे ने कहा कि इससे पहले एक दौर ऐसा था जब औद्योगिक निवेशक निवेश के लिए स्वयं चलकर आते थे, परंतु अब परिस्थिति अब बदल गईहै। हमें ही उनकी ओर जाने की जरूरत है। उद्योगपतियों को आकर्षित करने के लिए राज्य सरकार नए-नए प्रयोग कर रही है। इससे राज्य में पूंजी निवेश कर उद्योग शुरू करने के लिए कई कम्पनियां रुचि दिखा रही हैं। इससे स्थानीय युवकों को रोजगार देने पर विचार किया जा रहा है।

### पांच लाख युवाओं को कौशल प्रशिक्षण

देशपांडे ने कहा कि आंध्रप्रदेश, तेलंगाना, महाराष्ट्र, तमिलनाडु आदि राज्यों की बेरोजगारी की तुलना करेंगे तो हमारे कर्नाटक राज्य में उतनी ज्यादा बेरोजगारी नहीं है। राज्य के युवक व युवतियों को कौशल विकास प्रशिक्षण देकर राज्य में इस वर्ष पांच लाख युवाओं को रोजगार दिए जाएंगे। उद्योगों के विकास के साथ-साथ रोजगार के अवसर भी बढ़ेंगे। इससे सरकार को भी आय मिलेगी। इन सभी कार्रवाई से कर्नाटक राज्य देश में ही उद्योगों को बढ़ावा देने वाला राज्य है। उन्होंने कहा कि केन्द्रीय भाजपा सरकार ने चुनाव से पहले घोषणा की थी कि प्रति वर्ष एक करोड़ रोजगार पैदा किए जाएंगे। उनका यह आश्वासन झूठा साबित हो गया है।

### जीएसटी का स्वागत

आगामी जुलाई से देश में लागू होने वाले जीएसटी पर देशपांडे ने कहा कि एक देश एक कर नीति का हम स्वागत करते हैं। उपभोक्ताओं को इस विधेयक का लाभ मिलना चाहिए। शुरुआत में कुछ समस्या हो सकती है। एक राष्ट्र एक कर नीति से आगामी दिन आशादायक होंगे, परंतु कृषि मशीन ट्रेक्टर के पुर्जों को तथा हाइब्रिड वाहनों पर जीएसटी में कम कार लागू करने के लिए राज्य की कांग्रेस सरकार की ओर से कृषि मंत्री कृष्ण बैरेगौड़ा केन्द्र सरकार से आग्रह करेंगे। इस अवसर पर जिला प्रभारी मंत्री विनय कुलकर्णी, टाटा हिटाची इकाई के प्रबंध निदेशक संदीप सिंह आदि उपस्थित थे।

## ಟಾಟಾ ಹಿಟಾಚಿ ತರಬೇತಿ ಕೇಂದ್ರ ಉದ್ಘಾಟನೆ

# 5 ಲಕ್ಷ ಅಭ್ಯರ್ಥಿಗಳಿಗೆ ತರಬೇತಿ

**ಧಾರವಾಡ:** ಮುಂಬರುವ ದಿನಗಳಲ್ಲಿ ಸುಮಾರು 5 ಲಕ್ಷ ಯುವಕ, ಯುವತಿಯರಿಗಾಗಿ ಕೌಶಲ್ಯಾಭಿವೃದ್ಧಿ ತರಬೇತಿ ನೀಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಆರ್.ವಿ. ದೇಶಪಾಂಡೆ ಪ್ರಕಟಿಸಿದರು.

ನಗರದ ಬೇಲೂರು ಕೈಗಾರಿಕಾ ಪ್ರದೇಶದಲ್ಲಿ ಟಾಟಾ ಹಿಟಾಚಿ ಕಂಪೆನಿಯ ತರಬೇತಿ ಕೇಂದ್ರಕ್ಕೆ ಚಾಲನೆ ನೀಡಿ ಮಾತನಾಡಿದರು. ಈ ಹಿಂದೆ ಕೇಂದ್ರ ಸರಕಾರ ಒಂದು ಕೋಟಿ ಉದ್ಯೋಗ ಸೃಷ್ಟಿಸುವ ಭರವಸೆ ನೀಡಿತ್ತು. ಆದರೆ, ನೀಡಿದ ಮಾತನ್ನು ಈಡೇರಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರಕಾರವೇ ಕೌಶಲ್ಯಾಭಿವೃದ್ಧಿ ತರಬೇತಿ ನೀಡುವ ಕಾರ್ಯಕ್ರಮ ಹಾಕಿಕೊಂಡಿದೆ ಎಂದರು.

ದೇಶದಲ್ಲಿ ಶೇ. 65ರಷ್ಟು ಯುವಜನತೆ 35 ವರ್ಷದೊಳಗಿನವರಿದ್ದು, ಇವರೇ ದೇಶದ ಶಕ್ತಿ. ಇವರನ್ನು ಬಲಿಷ್ಠ ಹಾಗೂ ಸ್ವಾವಲಂಬಿಯನ್ನಾಗಿ ಮಾಡಬೇಕಿದೆ. ಸುಮಾರು 10 ಕೋಟಿ ರೂ.ಗಳಲ್ಲಿ ಸದ್ಯ ಈ ತರಬೇತಿ ಕೇಂದ್ರವನ್ನು ಪ್ರಾರಂಭಿಸಲಾಗಿದೆ. ಕೈಗಾರಿಕೆ ಇಲಾಖೆ ವತಿಯಿಂದ ಮೂಲಸೌಕರ್ಯಗಳ ಖರೀದಿಗೆ 18 ಕೋಟಿ ರೂ. ನೀಡಲಾಗಿದೆ. ಸ್ಥಳೀಯ ರೈತರ ಮಕ್ಕಳಿಗೆ, ಕೂಲಿ ಕಾರ್ಮಿಕರ ಮಕ್ಕಳಿಗೆ ಈ ತರಬೇತಿ ಕೇಂದ್ರ ಭವಿಷ್ಯ ರೂಪಿಸಿಕೊಳ್ಳಲು ಸಹಕಾರಿಯಾಗಲಿದೆ ಎಂದರು.

**ಕರ್ನಾಟಕ ಹಿಂದೆ**

ಕೈಗಾರಿಕೆಯಲ್ಲಿ ಉಳಿದ ನೆರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ರಾಜ್ಯ ತೀರಾ ಹಿಂದುಳಿದಿದೆ. ಇದೇ ಹಿನ್ನೆಲೆಯಲ್ಲಿ ರಾಜ್ಯ ಸರಕಾರ ಕೈಗಾರಿಕಾ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡುತ್ತಿದೆ. ರಾಜ್ಯ ಸರ್ಕಾರದ ಶ್ರಮದಿಂದ ಅಟೋಮೊಬೈಲ್ ಇಂಡಸ್ಟ್ರೀಸ್ ಹಾಗೂ ಮೈನಿಂಗ್ ಇಂಡಸ್ಟ್ರೀಸ್ ಈಗ ಚೇತರಿಕೆ ಕಾಣುತ್ತಿವೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ವಿನಯ ಕುಲಕರ್ಣಿ, ಟಾಟಾ ಹಿಟಾಚಿ ವ್ಯವಸ್ಥಾಪಕ ನಿರ್ದೇಶಕ ಸಂದೀಪಸಿಂಗ್, ಕೇಂದ್ರದ ಮುಖ್ಯಸ್ಥ ಎಸ್. ಉಮಾಪತಿ, ಅಜೀತ ಕುಲಕರ್ಣಿ, ಪ್ರಶಾಂತ ದೀಕ್ಷಿತ ಸೇರಿದಂತೆ ಇತರರು ಇದ್ದರು.

# Tata Hitachi Operator Training Centre opened




Large and Medium Industries Minister R.V. Deshpande at the newly inaugurated Tata Hitachi Operator Training Centre in Dharwad on Friday. ▪SPECIAL ARRANGEMENT

**STAFF REPORTER**
**DHARWAD**

Large and Medium Industries Minister R. V. Deshpande inaugurated the Tata Hitachi Operator Training Centre here on Friday.

A release by Tata Hitachi stated that the centre is close to the Tata Hitachi Dharwad plant which manufactures smaller excavators (under 20 T class) and wheeled equipment.

The centre will aim to enhance employability in the construction equipment industry both in India and abroad.

The centre also has refresher courses for factory and service personnel to sharpen their knowledge and capabilities to keep them abreast of the latest technologies, the release stated.

Minister in charge of the district Vinay Kulkarni, Pralhad Joshi, MP, Tata Hitachi managing director Sandeep Singh others were present.

# We will generate employment for five lakh youth this year: Minister

**EXPRESS NEWS SERVICE** @Dharwad

CREATING employment opportunities has become a challenge for the government, said Industries Minister R V Deshpande.

Inaugurating a skill development centre set up by Tata Hitachi at Belur Industrial Area on Friday, Deshpande said by 2025, the nation would have 65 per cent youths demanding jobs. If the government fails to make a road map in tackling this problem, unemployment can create unrest in society.

"To encourage small and medium scale industries, we have planned to hold an investor meet in October. Along with this, we are imparting skill training for youths in the state and hopefully, this will generate employment for five lakh youths this year," he said.

Deshpande welcomed the Goods and Services Tax (GST), but said on some agricultural equipment and vehicles, GST will have a negative impact.

Coming down heavily on the Bharatiya Janata Party, the minister said: "The state government has shown its concern towards farmers by waiving crop loans. It is time for BJP leaders here to exert pressure on the Central government to write off the farmers' loans from nationalised banks."

Further, Deshpande said, the Legislative Assembly has approved the Rs 72 crore Kali River drinking water project and which will cover 14 villages of Haliyal taluk and reach Alnavar. Another irrigation project worth Rs 220 crore in Haliyal has also been approved and it will provide water for 20,000 hectares, he added.

Ajit Kulkarni of Tata Hitachi Training Centre, said training will be imparted free of cost. The motto is to enhance skill among the youth and assist them to secure jobs. After 21 days of training, the centre will also provide certificates to the trained youths, he said.

**To encourage small and medium scale industries, we have planned to hold an investor meet in October. Along with this, we are imparting skill training for youths in the state and hopefully, this will generate employment for five lakh youths this year**

**R V Deshpande, Minister**

# 5 lakh youths will get skill training

## Industries Minister Deshpande Stresses On Need For Making Graduat

TIMES NEWS NETWORK

**Dharwad:** Large and medium industries minister RV Deshpande said that the biggest challenge in India is to provide employment to youths. Almost 60% of the India's population is in 18-35 age group and making them industry-ready is the need of the hour, he said, addressing the gathering after inaugurating Tata Hitachi Operator Training Centre at Belur Industrial Area in Dharwad on Friday.

He said that by 2025, India will emerge as the country of young population. To empower this population with jobs, there is a need for growth of industrial sector. However, there is a stiff competition in industrial sector and only those who possess creative skills stand better chance of getting jobs.



**HARBINGER OF GROWTH:** Large and medium industries minister RV Deshpande inaugurates the Tata Hitachi Operator Training Centre

### TATA HITACHI CENTRE OPENS

In this regard, both the Centre and the state have launched skill development programmes. Need-based training will be imparted to the youths free of cost, he added. In Karnataka, a separate skill ministry has been formed headed by chief minister Siddaramaiah and this year the government is aiming to provide skill training to more than 5 lakh youths, said the minister.

The automobile sector went through a rough phase in the last two years but now the Supreme Court has given permission to 10 mining companies in the state. With this there will be growth of the automobile sector in the state, he added.

The NDA government while coming to power had assured of creating one crore jobs every year, but has drastically failed to keep up to their promises. The unemployment rate in other states is as high as 2%, but in Karnataka it is 1.1%. Karnataka is doing very well in creating jobs and is also invoking industries to set up more plants here, said Deshpande adding that to enhance the facilities at Belur industrial area, the government has sanctioned Rs 18 crore.

Referring to Tata Hitachi, Deshpande said that Tata have always been a wonderful partners and have invested in large scale in Karnataka. The Tata Hitachi Operator Training Centre set up in Dharwad will provide skill training to 950 youths every year. The company heads have been asked to expand their area of operation and see that youths who have completed SSLC, ITI, diploma and other technical courses from parts of North Karnataka get training at this centre. This apart, the government has also conducted series of meeting with the civil aviation minister asking them to operate two daily flights from Hubballi airport. The airport has been upgraded and even boeings can land here. Hence, one direct flight to Bengaluru and another link flight to Mumbai can further boost the industrial sector here, he said.

### Kali river project

Deshpande who is also the district in-charge minister of Uttar Kannada stated that the project of supplying water from Kali river to Alnavar town got cabinet clearance on Thursday. Chief minister Siddaramaiah has sanctioned Rs 72 crore for this project which will supply water to 14 villages in Haliyal taluk and to the newly proposed Alnavar taluk. An additional Rs 20 crore is earmarked to implement the irrigatio which will bring 20,00 of land in this region rigation facility.

District in-charge

# No GIM in 2017, state to focus more o

TIMES NEWS NETWORK

**Dharwad:** The state government will not conduct global investors' meet (GIM) this year but will give emphasis to boost micro, small and medium scale industries.

Speaking to mediapersons in Dharwad on Friday during his visit to inaugurate Tata Hitachi Operators Training Centre, Deshpande stated that chief minister Siddaramaiah has suggested to hold MSME investors' meet and accordingly, the meet will be held in Bengaluru in October.

At the last GIM, there was a flow of Rs 1.77 lakh crore investment with more than 1,080 new projects getting clearance from the government. Of the total cleared projects, 4% companies have withdrawn their proposal of setting up industries while 50% of the industries have been grounded and 46% industries have signed MoU and will be setting up industries in a couple of years. Compared to the GIMs of previous edition, the GIM held last year has turned out to be bonanza for the industrial sector in the state, said the minister.

Speaking on GST, the minister stated that the state government has welcomed the decision of rolling out GST on July 1. The centre had sought suggestions from the state and accordingly, agriculture minister Krishna Byre Gowda will represent the state in New Delhi. The state government has asked the Union government to reduce tax on hybrid vehicles, farm equipments and on spare parts of tractors to help farmers.

In April and May, tax collection in the state has increased to 14% and if there is any shortfall after implementation of GST, the Centre has assured of reimbursing the tax amount, he noted.

**Belur farmers demand ₹86 L per acre**

Farmers from Belur village on the outskirts of Dharwad city met minister RV Deshpande during his visit to Tata Hitachi plant on Friday and placed a charter of demands before him.

They stated that the state government through the district administration and the Karnataka Industrial Area Development Board (KIADB) has issued notification for

# ಕೈಗಾರಿಕೆಗೆ ಭೂಮಿ ಕೊಟ್ಟವರಿಗೆ ಹೆಚ್ಚಿನ ಪರಿಹಾರ

## ■ ಖಾಸಗಿಯಾಗಿ ಭೂಮಿ ಮಾರಿದರೆ ಕೋಟಿಗಟ್ಟಲೆ ಹಣ ಬರುತ್ತೆ, ಸರ್ಕಾರವೂ ಕೊಡಲಿ: ರೈತರು

**ಧಾರವಾಡ:** ಕೈಗಾರಿಕಾ ಪ್ರದೇಶಕ್ಕೆ ಭೂಮಿ ಬಿಟ್ಟುಕೊಟ್ಟ ರೈತರಿಗೆ ಹೆಚ್ಚಿನ ಪರಿಹಾರ ನೀಡುವ ಕುರಿತು ಸರ್ಕಾರದ ಮಟ್ಟದಲ್ಲಿ ಪುನರ್ ಪರಿಶೀಲನೆ ಮತ್ತು ಚರ್ಚೆ ನಡೆಸುವುದಾಗಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಆರ್.ವಿ. ದೇಶಪಾಂಡೆ ರೈತರಿಗೆ ಭರವಸೆ ನೀಡಿದರು.

ಇಲ್ಲಿನ ಬೇಲೂರು ಕೈಗಾರಿಕೆ ಪ್ರದೇಶದಲ್ಲಿ ಶುಕ್ರವಾರ ಸಚಿವರನ್ನು ಭೇಟಿ ಮಾಡಿ ಹೆಚ್ಚಿನ ಪರಿಹಾರ ನೀಡುವಂತೆ ಮನವಿ ಸಲ್ಲಿಸಿದ ರೈತರು, ಧಾರವಾಡ ಜಿಲ್ಲಾಡಳಿತ ನಮಗೆ ಎಕರೆಗೆ ಬರೀ 25 ಲಕ್ಷ ರೂ. ಪರಿಹಾರ ನೀಡುವುದಾಗಿ ಘೋಷಿಸಿದೆ. ಆದರೆ ಅಷ್ಟು ಪರಿಹಾರ ಸಾಲದು. ಖಾಸಗಿಯಾಗಿ ಭೂಮಿ ಮಾರಾಟ ಮಾಡಿದರೆ ಕೋಟಿಗಟ್ಟಲೆ ಹಣ ಬರುತ್ತದೆ. ಕಡಿಮೆ ಪರಿಹಾರ ನೀಡಿದರೆ ನಾವು ಸರ್ಕಾರಕ್ಕೆ ಭೂಮಿ ಕೊಡುವುದಿಲ್ಲ, ದಯಮಾಡಿ ಹೆಚ್ಚಿನ ಪರಿಹಾರ ಕೊಡಿಸಿ ಎಂದು ಆಗ್ರಹಿಸಿದರು.

ಇದಕ್ಕೆ ಉತ್ತರಿಸಿದ ಸಚಿವ ದೇಶಪಾಂಡೆ, ಸರ್ಕಾರ ಪ್ರತಿ ಎಕರೆ ಭೂಮಿಗೆ 30 ಲಕ್ಷ ರೂ. ಪರಿಹಾರ ನೀಡುವ ಕುರಿತು ಭರವಸೆ ನೀಡಿದೆ. ಆದರೆ ನಿಮ್ಮ ನೋವು ನನಗೆ ಅರ್ಥವಾಗಿದ್ದು ಹೆಚ್ಚಿನ ಪರಿಹಾರ ನೀಡುವ ಕುರಿತು ಮುಖ್ಯಮಂತ್ರಿಗಳು ಮತ್ತು ಸರ್ಕಾರದ ಮಟ್ಟದಲ್ಲಿ ಹಾಗೂ ಧಾರವಾಡ ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿ ಹೆಚ್ಚಿನ ಅನುದಾನ ನೀಡಲು ಪ್ರಯತ್ನಿಸುವುದಾಗಿ ರೈತರಿಗೆ ಭರವಸೆ ನೀಡಿದರು.

**ಪರಿಹಾರಕ್ಕೆ ಯತ್ನ:** ಇದೇ ವೇಳೆ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ವಿನಯ್ ಕುಲಕರ್ಣಿ, ಪರಿಹಾರ ನೀಡುವ ಕುರಿತು ಈ ಹಿಂದೆಯೂ ನಾನು ಜಿಲ್ಲಾಧಿಕಾರಿಗಳ ಗಮನ ಸೆಳೆದಿದ್ದೆ. ಸರ್ಕಾರದ ಮಟ್ಟದಲ್ಲಿ ಹೆಚ್ಚಿನ ಪರಿಹಾರಕ್ಕೆ ಖಂಡಿತವಾಗಿಯೂ ಪ್ರಯತ್ನ ಮಾಡುತ್ತೇನೆ ಎಂದು ರೈತರಿಗೆ ಭರವಸೆ ನೀಡಿದರು.

### ವೆಂಕಯ್ಯಗೆ ವಿನಯ್ ಸವಾಲು

ವೆಂಕಯ್ಯ ನಾಯ್ಡು ಅವರು ರೈತರ ಸಾಲ ಮನ್ನಾ ಕುರಿತು ನೀಡಿರುವ ಹೇಳಿಕೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿರುವ ಜಿಲ್ಲಾ ಉಸ್ತುವಾರಿ ಸಚಿವ ವಿನಯ್ ಕುಲಕರ್ಣಿ, ರೈತರ ಸಾಲ ಮನ್ನಾ ಫ್ಯಾಶನ್ ಆಗಿದೆ ಎಂದು ಹೇಳುವ ಮೂಲಕ ಕೇಂದ್ರ ಸಚಿವ ವೆಂಕಯ್ಯ ನಾಯ್ಡು ಅವರು ರೈತರಿಗೆ ಅವಮಾನ ಮಾಡಿದ್ದಾರೆ. ಇದು ರೈತರ ಬಗೆಗಿರುವ ಬಿಜೆಪಿಯ ಕಾಳಜಿಯನ್ನು ತೋರಿಸುತ್ತದೆ. ರಾಜ್ಯ ಸರ್ಕಾರ ಸಾಲ ಮನ್ನಾ ಮಾಡುವ ಮುನ್ನ ದೊಡ್ಡದಾಗಿ ಮಾತನಾಡುತ್ತಿದ್ದ ಯಡಿಯೂರಪ್ಪ, ಜಗದೀಶ ಶೆಟ್ಟರ್ ಮತ್ತು ಪ್ರಹ್ಲಾದ ಜೋಶಿ ಅವರು ಈಗ ದಿಲ್ಲಿ ವಿಮಾನ ಹತ್ತಿ ಹೋಗಿ ರಾಷ್ಟ್ರೀಕೃತ್ ಬ್ಯಾಂಕ್‌ಗಳಲ್ಲಿನ ಸಾಲವನ್ನು ಮನ್ನಾ ಮಾಡಿಸಬೇಕು. ಇಲ್ಲವಾದರೆ ಅವರ ರೈತ ಕಾಳಜಿಯ ಮುಖವಾಡ ಕಳಚುತ್ತದೆ ಎಂದು ಕಿಡಿಕಾರಿದರು.

ಕಾಳಿ ನದಿಯಿಂದ ಅಳ್ನಾವರ ಪಟ್ಟಣ ಮತ್ತು 20 ಸಾವಿರ ಎಕರೆಯಷ್ಟು ಭೂಮಿಗೆ ನೀರಾವರಿ ಒದಗಿಸಲು ಕೆರೆ ತುಂಬಿಸುವ ಕುರಿತ ಯೋಜನೆಗೆ ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ಪಡೆದು ಆಡಳಿತಾತ್ಮಕ ಮಂಜೂರಿ ನೀಡಲಾಗಿದೆ. ಇದರಿಂದ ಅಲ್ಲಿನ ರೈತರಿಗೆ ಹೆಚ್ಚಿನ ಅನುಕೂಲವಾಗಲಿದೆ.

● ಆರ್.ವಿ.ದೇಶಪಾಂಡೆ
ಉ.ಕ. ಜಿಲ್ಲಾ ಉಸ್ತುವಾರಿ ಸಚಿವ

---

ಹಿರಿಯ ಕಾಂಗ್ರೆಸಿಗರಾಗಿದ್ದ ಎಚ್. ವಿಶ್ವನಾಥ ಅವರು ಕಾಂಗ್ರೆಸ್ ಬಿಟ್ಟಿದ್ದರಿಂದ ಪಕ್ಷಕ್ಕೇನೂ ನಷ್ಟವಿಲ್ಲ, ಕಾಂಗ್ರೆಸ್ ಸಮುದ್ರ ಇದ್ದಂತೆ. ಬರುವವರು ಬರುತ್ತಾರೆ, ಹೋಗುವವರು ಹೋಗುತ್ತಾರೆ.

● ವಿನಯ ಕುಲಕರ್ಣಿ, ಜಿಲ್ಲಾ ಉಸ್ತುವಾರಿ ಸಚಿವ

# ಟಾಟಾ ಹಿಟ್ಯಾಚಿ ತರಬೇತಿ ಕೇಂದ್ರ ಉದ್ಘಾಟನೆ

## ಧಾರವಾಡದ ಕೈಗಾರಿಕಾ ಪ್ರದೇಶ ಬೇಲೂರಲ್ಲಿ 10 ಕೋಟಿ ವೆಚ್ಚದಲ್ಲಿ ಕೇಂದ್ರ ನಿರ್ಮಾಣ

**ಧಾರವಾಡ:** ಒಟ್ಟು 10 ಕೋಟಿ ರೂ. ವೆಚ್ಚದಲ್ಲಿ ಆರಂಭಿಸಿರುವ ಟಾಟಾ ಹಿಟ್ಯಾಚಿ ಆಪರೇಟರ್ ಗಳ ತರಬೇತಿ ಕೇಂದ್ರ ಗ್ರಾಮೀಣ ಯುವಕರಿಗೆ ಅನುಕೂಲವಾಗಲಿದೆ ಎಂದು ಕೈಗಾರಿಕೆ ಸಚಿವ ಆರ್.ವಿ. ದೇಶಪಾಂಡೆ ಹೇಳಿದರು.



**ಧಾರವಾಡ: ಇಲ್ಲಿನ ಬೇಲೂರು ಕೈಗಾರಿಕೆ ಪ್ರದೇಶದಲ್ಲಿನ ಟಾಟಾ ಹಿಟ್ಯಾಚಿ ಆಪರೇಟರ್ ಗಳ ತರಬೇತಿ ಕೇಂದ್ರವನ್ನು ಕೈಗಾರಿಕಾ ಸಚಿವ ಆರ್.ವಿ. ದೇಶಪಾಂಡೆ ಉದ್ಘಾಟಿಸಿದರು.**

ಬೇಲೂರು ಕೈಗಾರಿಕಾ ಪ್ರದೇಶದ 8 ಎಕರೆ ಜಾಗದಲ್ಲಿ ಸ್ಥಾಪನೆಯಾಗಿರುವ ಟಾಟಾ ಹಿಟ್ಯಾಚಿ ಆಪರೇಟರ್‌ಗಳ ತರಬೇತಿ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಟಾಟಾ ಹಿಟ್ಯಾಚಿ ಕಂಪನಿ, ಕೆಲವು ವರ್ಷಗಳಿಂದ ಆಪರೇಟರ್‌ಗಳಿಗೆ ತರಬೇತಿ ನೀಡುತ್ತಿದೆ. ಇಲ್ಲಿ ಪ್ರತಿವರ್ಷ 950 ಜನರು ತರಬೇತಿ ಪಡೆದುಕೊಳ್ಳುತ್ತಿದ್ದಾರೆ. ಈ ಭಾಗದಲ್ಲಿ ಇಂತಹ ಒಂದು ಕೇಂದ್ರ ಸ್ಥಾಪನೆ ಮಾಡುವ ಅಗತ್ಯವಿತ್ತು. ಅದಕ್ಕಾಗಿ ಸರ್ಕಾರದ ಸಹಕಾರದಲ್ಲಿ ಕಂಪನಿ ಈ ಕೇಂದ್ರ ಆರಂಭಿಸಿದೆ ಎಂದರು.

ಯುವಶಕ್ತಿಗೆ ಉದ್ಯೋಗ ನೀಡುವ ಅಗತ್ಯವಿದ್ದು, ರಾಜ್ಯ ಸರ್ಕಾರ 5 ಲಕ್ಷ ಯುವಕರಿಗೆ ತಾಂತ್ರಿಕ ಕೌಶಲ ತರಬೇತಿ ನೀಡಿ ಅವರನ್ನು ಉದ್ಯೋಗಕ್ಕಾಗಿ ಸಜ್ಜುಗೊಳಿಸುತ್ತಿದೆ. ಕೈಗಾರಿಕೆಗಳಿಗೆ ಭೂಮಿ ಕಳೆದುಕೊಂಡವರಿಗೂ ಇಲ್ಲಿ ಆದ್ಯತೆ ನೀಡುವಂತೆ ಸ್ಥಾಪನೆಯಾದ ಎಲ್ಲ ಕಂಪನಿಗಳಿಗೆ ಸರ್ಕಾರ ಸಲಹೆ ನೀಡಿದೆ ಎಂದರು.

**ಬೇಲೂರಿಗೆ 18 ಕೋಟಿ:** ಧಾರವಾಡ ತಾಲೂಕಿನ ಬೇಲೂರು ಕೈಗಾರಿಕಾ ಪ್ರದೇಶದ ಅಭಿವೃದ್ಧಿಗೆ ನಾನು 18 ವರ್ಷಗಳ ಹಿಂದೆ ಕೈಗಾರಿಕಾ ಸಚಿವನಿದ್ದಾಗಲೂ ಶ್ರಮಿಸಿದ್ದೆ. ಆಗ ಇಲ್ಲಿ ಏನೂ ಇರಲಿಲ್ಲ, ಈ ಪ್ರದೇಶದಲ್ಲಿ ಇಂದು ಸಾವಿರಾರು ಜನ ಕೆಲಸ ಮಾಡುತ್ತಿದ್ದಾರೆ. ಇದೀಗ ಮತ್ತೆ ಕೈಗಾರಿಕಾ ಸಚಿವನಾಗಿದ್ದೇನೆ. ಈ ಪ್ರದೇಶದಲ್ಲಿ ಮೂಲ ಸೌಕರ್ಯಗಳ ಅಭಿವೃದ್ಧಿಗೆ ಕ್ರಮ ಕೈಗೊಂಡಿದ್ದು, ಸರಕಾರ 18 ಕೋಟಿ ರೂ. ಬಿಡುಗಡೆ ಮಾಡಿದೆ ಎಂದು ಹೇಳಿದರು.

**ಉಡಾನ್ ಸಹಾಯ:** ಕೇಂದ್ರ ಸರ್ಕಾರ ದೇಶಿ ವಿಮಾನಯಾನ ಬಲವರ್ಧನೆಗೆ ಆರಂಭಿಸಿರುವ ಉಡಾನ್ ಯೋಜನೆಯಡಿ ರಾಜ್ಯದ ಬೀದರ್, ತೋರಣಗಲ್ ಮೈಸೂರು ವಿಮಾನ ನಿಲ್ದಾಣಗಳನ್ನು ಉನ್ನತೀಕರಣ ಮಾಡಲಾಗುತ್ತಿದೆ. ಹುಬ್ಬಳ್ಳಿ ವಿಮಾನ ನಿಲ್ದಾಣ ಅಭಿವೃದ್ಧಿ ಕಾರ್ಯ ಮುಕ್ತಾಯವಾಗಿದ್ದು ಇನ್ನೇನು ಇಲ್ಲಿ ಅಂತಾರಾಷ್ಟ್ರೀಯ ಮಟ್ಟದ ಬೊಯಿಂಗ್ ವಿಮಾನಗಳು ಕೂಡ ಹಾರಾಟ ನಡೆಸಲಿವೆ ಎಂದರು ದೇಶಪಾಂಡೆ ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವ ವಿನಯ್ ವಿನಯ್ ಕುಲಕರ್ಣಿ, ಟಾಟಾ ಹಿಟ್ಯಾಚಿ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಸಂದೀಪ್ ಸಿಂಗ್ ಸೇರಿದಂತೆ ಕಂಪನಿಯ ಹಿರಿಯ ಅಧಿಕಾರಿಗಳು ಇದ್ದರು.



ಧಾರವಾಡದಲ್ಲಿ ಟಾಟಾ ಹಿಟಾಚಿ ಆಪರೇಟರ್ ತರಬೇತಿ ಕೇಂದ್ರ ಉದ್ಘಾಟಿಸಿದ ನಂತರ ಸಚಿವ ಆರ್.ವಿ. ದೇಶಪಾಂಡೆ ಪರಿಕರಗಳನ್ನು ವೀಕ್ಷಿಸಿದರು. ಸಚಿವ ವಿನಯ ಕುಲಕರ್ಣಿ ಮತ್ತಿತರರಿದ್ದರು.

# ಹಿಟಾಚಿ ತರಬೇತಿ ಕೇಂದ್ರಕ್ಕೆ ಚಾಲನೆ



ಟಾಟಾ ಹಿಟಾಚಿ ಆಪರೇಟರಾ ತರಬೇತಿ ಕೇಂದ್ರವನ್ನು ಸಚಿವ ದೇಶಪಾಂಡೆ ಉದ್ಘಾಟಿಸಿದರು.

**ವಿಶ್ವವಾಣಿಸುದ್ದಿಮನೆ** ಧಾರವಾಡ

ಇಲ್ಲಿನ ಬೇಲೂರು ಕೈಗಾರಿಕಾ ಪ್ರದೇಶದಲ್ಲಿರುವ ಟಾಟಾ ಹಿಟಾಚಿ ಘಟಕದಲ್ಲಿ ನೂತನವಾಗಿ ಆರಂಭಿಸಲಾಗಿರುವ ಟಾಟಾ ಹಿಟಾಚಿ ಆಪರೇಟರ್ ಉಚಿತ ಟ್ರೈನಿಂಗ್ ಸೆಂಟರ್‌ನ್ನು ಶುಕ್ರವಾರ ಬೃಹತ್ ಕೈಗಾರಿಕಾ ಸಚಿವ ಆರ್.ವಿ.ದೇಶಪಾಂಡೆ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಸಚಿವ ದೇಶಪಾಂಡೆ ಡಿಜಿಟಲೀಕರಣ ಯುವಕ ಯುವತಿಯರ ಉದ್ಯೋಗಗಳಿಗೆ ಕುತ್ತು ತರುತ್ತಿದೆ. ಈ ದಿಶೆಯಲ್ಲಿ ಹೊಸ ಆಲೋಚನೆಗಳಿಗೆ ನಾಂದಿ ಹಾಡಬೇಕಿದೆ ಎಂದು ಹೇಳಿದರು.

ದೇಶದಲ್ಲಿ ಉದ್ಯೋಗ ಲಭ್ಯತೆ ಪ್ರಮಾಣ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಾ ಬರುತ್ತಿದೆ. ಆದರೆ, ಕರ್ನಾಟಕದಲ್ಲಿ ಆ ರೀತಿಯ ತೊಂದರೆ ಕಾಣಿಸುತ್ತಿಲ್ಲ. ಮುಖ್ಯಮಂತ್ರಿಗಳ ಕೌಶಲ್ಯ ಅಭಿವೃದ್ಧಿ ಯೋಜನೆಯಡಿ ಒಂದೇ ಕಡೆ 5 ಲಕ್ಷ ಯುವಕ ಯುವತಿಯರಿಗೆ ಕೌಶಲ ನೀಡುವ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಇದರಿಂದ ಕೈಗಾರಿಕೆಗಳ ಬೆಳವಣಿಗೆಗೆ ಸಹಾಯ ಆಗುತ್ತೆ ಎಂದು ಅಭಿಪ್ರಾಯಪಟ್ಟರು. ದೇಶದ ಮಹತ್ವದ ಸಂಸ್ಥೆಯಾದ ಟಾಟಾ ನಮ್ಮ ಜೊತೆ ಅಭಿವೃದ್ಧಿ ಕೆಲಸಗಳಿಗೆ ಕೈ ಜೋಡಿಸುತ್ತಿದೆ. ಬೇಲೂರು ಘಟಕದ ಟಾಟಾ ಹಿಟಾಚಿಯಲ್ಲಿ ಸುಮಾರು 10 ಕೋಟಿ ರುಪಾಯಿ ವೆಚ್ಚದಲ್ಲಿ ತರಬೇತಿ ಘಟಕ ಆರಂಭಿಸಿರುವುದು ಸಂತಸದ ಸುದ್ದಿ. ಕೈಗಾರಿಕೆಗಳಿಗೆ ನಾವು ಅಗತ್ಯ ಸಹಕಾರ ನೀಡುತ್ತಾ ಬಂದಿದ್ದೇವೆ. ಬೇಲೂರು ಕೈಗಾರಿಕಾ ಪ್ರದೇಶಾಭಿವೃದ್ಧಿಗೆ 10 ಕೋಟಿ ರುಪಾಯಿ ನೀಡಿದ್ದೇವೆ ಎಂದರು. ಈ ವೇಳೆ ಸಚಿವ ವಿನಯ ಕುಲಕರ್ಣಿ, ಟಾಟಾ ಹಿಟಾಚಿ ವ್ಯವಸ್ಥಾಪಕ ನಿರ್ದೇಶಕ ಸಂದೀಪ್ ಸಿಂಗ್ ಸೇರಿದಂತೆ ಸಿಬ್ಬಂದಿ ಇದ್ದರು.

## ಪರಿಹಾರ ಕಡಿಮೆ

ಇದೇ ವೇಳೆ ಸಚಿವ ದೇಶಪಾಂಡೆ ಅವರಿಗೆ ಬೇಲೂರು ಕೈಗಾರಿಕಾ ಪ್ರದೇಶಕ್ಕೆ ಭೂಮಿ ನೀಡಿದ ರೈತರು ಮನವಿ ಸಲ್ಲಿಸಿದರು. 2007 ರಲ್ಲಿ ಭೂಮಿ ನೀಡಿದ್ದೇವೆ. ಆದರೆ, ಮಾರುಕಟ್ಟೆ ಬೆಲೆ ಪ್ರಕಾರ ನಮಗೆ ಪರಿಹಾರ ನೀಡುತ್ತಿಲ್ಲ. ಏಕರೆಗೆ 30 ಲಕ್ಷ ಎಂದು ಜಿಲ್ಲಾಧಿಕಾರಿಯರು ಪಟ್ಟು ಹಿಡಿದಿದ್ದಾರೆ. ನಾವು ಒಪ್ಪದಿದ್ದರೂ ಭೂಮಿ ಸ್ವಾಧೀನಪಡಿಸಿಕೊಂಡಿದ್ದಾರೆ. ನಮಗೆ 40 ಲಕ್ಷ ರುಪಾಯಿ ಪರಿಹಾರ ಬೇಕು ಎಂದು ಆರೋಪಿಸಿದರು. ಈ ಬಗ್ಗೆ ಸಭೆ ಕರೆದು ಚರ್ಚಿಸುವುದಾಗಿ ದೇಶಪಾಂಡೆ ರೈತರಿಗೆ ಭರವಸೆ ನೀಡಿದರು.

# ಉದ್ಯೋಗ ಸೃಷ್ಟಿ ಸವಾಲಿನ ಕೆಲಸ

## ಬೇಲೂರಲ್ಲಿ ಟಾಟಾ ಹಿಟಾಚಿ ತರಬೇತಿ ಕೇಂದ್ರ ಉದ್ಘಾಟನೆ | ಸಚಿವ ದೇಶಪಾಂಡೆ ಅಭಿಮತ

■ ವಿಜಯವಾಣಿ ಸುದ್ದಿಜಾಲ ಧಾರವಾಡ

ಇಲ್ಲಿನ ಬೇಲೂರು ಕೈಗಾರಿಕಾ ಪ್ರದೇಶದಲ್ಲಿ ಟಾಟಾ ಹಿಟಾಚಿ ವತಿಯಿಂದ ಪ್ರಾರಂಭಿಸಿರುವ ಹಿಟಾಚಿ ಆಪರೇಟರ್ ಕೇಂದ್ರವನ್ನು ಕೈಗಾರಿಕಾ ಸಚಿವ ಆರ್.ವಿ. ದೇಶಪಾಂಡೆ ಶುಕ್ರವಾರ ಉದ್ಘಾಟಿಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 10 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಿರುವ ಇಂತಹ ತರಬೇತಿ ಕೇಂದ್ರಗಳು ಇಂದಿನ ದಿನಗಳಲ್ಲಿ ಅಗತ್ಯವಾಗಿವೆ. ಹಿಟಾಚಿ ಆಪರೇಟಿಂಗ್ ಹಾಗೂ ತಂತ್ರಜ್ಞಾನ ಕುರಿತು ತರಬೇತಿ ನೀಡುತ್ತಿದ್ದಾರೆ ಎಂದರು.

2025ರವರಗೆ ಭಾರತದ ಜನಸಂಖ್ಯೆಯಲ್ಲಿ ಅತೀ ಹೆಚ್ಚು ಯುವಕರೇ ಸ್ಥಾನ ಪಡೆಯಲಿದ್ದು, ದೇಶದಲ್ಲಿ ಉದ್ಯೋಗ ಸೃಷ್ಟಿಸುವುದು ಸವಾಲಿನ ಕೆಲಸವಾಗಿದೆ. ಹೀಗಾಗಿ 5 ಲಕ್ಷ ಯುವಕರಿಗೆ ತರಬೇತಿ ನೀಡಲು ರಾಜ್ಯ ಸರ್ಕಾರ ಉದ್ಯೋಗ ಅಭಿವೃದ್ಧಿ ಕೌಶಲ ಸಚಿವಾಲಯ ಪ್ರಾರಂಭಿಸಲಿದೆ. ಸಚಿವಾಲಯದೊಂದಿಗೆ ಕೈ ಜೋಡಿಸಲು ಕೇಂದ್ರದ ಮುಖ್ಯಸ್ಥರಿಗೆ ಸಲಹೆ ನೀಡಿದ್ದೇನೆ ಎಂದರು.

ಕೇಂದ್ರದಲ್ಲಿ ರೈತರ ಮಕ್ಕಳಿಗೆ, ಕೂಲಿ ಕಾರ್ಮಿಕರ ಮಕ್ಕಳಿಗೆ ತರಬೇತಿ ನೀಡಲು ಹೆಚ್ಚಿನ ಆಸಕ್ತಿ ತೋರಬೇಕು. ಉದ್ಯೋಗ ಸೃಷ್ಟಿಗೆ ಈ ಕೇಂದ್ರ ಕಾಮಧೇನು ಇದ್ದಂತೆ. ಹೀಗಾಗಿ ಯುವಕರು ಈ ಕೇಂದ್ರದ ಪ್ರಯೋಜನ ಪಡೆಯಬೇಕು. ಕೈಗಾರಿಕೆಗಳು ಬೆಳೆದಷ್ಟು ಉದ್ಯೋಗಗಳು ಸೃಷ್ಟಿಯಾಗಲಿವೆ. ಇದರಿಂದ ಸರ್ಕಾರಕ್ಕೂ ಟ್ಯಾಕ್ಸ್ ಮೂಲಕ ಹಣ ಬರಲಿದೆ ಎಂದರು.

ಒಂದು ಕೋಟಿಗೂ ಹೆಚ್ಚು ಉದ್ಯೋಗ ಸೃಷ್ಟಿಸುವ ಭರವಸೆ ನೀಡಿದ್ದ ಕೇಂದ್ರ ಸರ್ಕಾರದ ಮಾತು ಹುಸಿಯಾಗಿದೆ. ಮಹಾರಾಷ್ಟ್ರ, ಆಂಧ್ರಪ್ರದೇಶ ಹಾಗೂ ತಮಿಳುನಾಡಿಗೆ ಹೋಲಿಸಿದರೆ, ಕರ್ನಾಟಕ ಕೈಗಾರಿಕೆ ಅಭಿವೃದ್ಧಿಯಲ್ಲಿ ತೀರಾ ಹಿಂದುಳಿದಿದೆ. ರಾಜ್ಯ ಸರ್ಕಾರದ ಶ್ರಮದಿಂದ ಆಟೋಮೊಬೈಲ್ ಇಂಡಸ್ಟ್ರೀಸ್ ಹಾಗೂ ಮೈನಿಂಗ್ ಇಂಡಸ್ಟ್ರೀಸ್ ಈಗ ಚೇತರಿಕೆ ಕಾಣುತ್ತಿವೆ ಎಂದರು.

ಜು. 1ರಿಂದ ಜಾರಿಗೆ ಬರಲಿರುವ ಜಿಎಸ್‌ಟಿ ಸ್ವಾಗತಾರ್ಹ. ಆದರೆ, ಕೈಗಾರಿಕೆ ಹಾಗೂ ಕೃಷಿ ಪರಿಕರಗಳ ಮೇಲಿನ ತೆರಿಗೆ ಇಳಿಕೆಗೆ ಕೇಂದ್ರಕ್ಕೆ ಮನವಿ ಮಾಡಲಾಗಿತ್ತು. ಅದಕ್ಕೆ ಇನ್ನೂ ಮಾನ್ಯತೆ ಸಿಕ್ಕಿಲ್ಲ. ಜಿಎಸ್‌ಟಿಯಿಂದ ರಾಷ್ಟ್ರಕ್ಕೆ ಉತ್ತಮವಾಗಲಿದೆ. ಇದರಿಂದ ಗ್ರಾಹಕರಿಗೆ ಸಹ ಹಲವಾರು ಪ್ರಯೋಜನಗಳಾಗಲಿವೆ ಎಂದರು.

ಸದ್ಯಕ್ಕೆ ಗ್ಲೋಬಲ್ ಇನ್‌ವೆಸ್ಟರ್ ಮೀಟ್ (ಜಿಮ್) ನಡೆಸುವ ವಿಚಾರವಿಲ್ಲ. ಆದರೆ ಸಣ್ಣ, ಮಧ್ಯಮ ಕೈಗಾರಿಕೆ ಹೂಡಿಕೆದಾರರ ಸಮಾವೇಶ ನಡೆಸಲು ಚಿಂತಿಸಲಾಗಿದೆ. ಹಿಂದಿನ ವರ್ಷಗಳಲ್ಲಿ ನಡೆದ ಜಿಮ್‌ನಲ್ಲಿನ 1,080 ಪ್ರೊಜೆಕ್ಟ್‌ಗೆ ಸರ್ಕಾರ ಒಪ್ಪಿಗೆ ಸೂಚಿಸಿದ್ದು, ಶೇ. 4 ಬಾಕಿ ಇವೆ. 2010- 2012ರಲ್ಲಿ ನಡೆದ ಜಿಮ್ ಮಾತ್ರ ವಿಫಲವಾಗಿದೆ ಎಂದರು. ಟಾಟಾ ಹಿಟಾಚಿ ವ್ಯವಸ್ಥಾಪಕ ನಿರ್ದೇಶಕ ಸಂದೀಪ ಸಿಂಗ್, ಸಚಿವ ವಿನಯ ಕುಲಕರ್ಣಿ, ಕೇಂದ್ರದ ಮುಖ್ಯಸ್ಥ ಎಸ್. ಉಮಾಪತಿ, ಟಾಟಾ ಹಿಟಾಚಿ ತರಬೇತಿ ಕೇಂದ್ರದ ಸಿಬ್ಬಂದಿ, ಇತರರು ಇದ್ದರು.



ವಿಜಯವಾಣಿ ಚಿತ್ರ

ಧಾರವಾಡ ಬೇಲೂರಲ್ಲಿ ನೂತನವಾಗಿ ಪ್ರಾತರಂಭಸಿರುವ ಹಿಟಾಚಿ ಆಪರೇಟರ್ ಕೇಂದ್ರವನ್ನು ಸಚಿವ ಆರ್.ವಿ. ದೇಶಪಾಂಡೆ ಉದ್ಘಾಟಿಸಿದರು. ಟಾಟಾ ಹಿಟಾಚಿ ವ್ಯವಸ್ಥಾಪಕ ನಿರ್ದೇಶಕ ಸಂದೀಪ ಸಿಂಗ್ ಮತ್ತಿತರರು ಉಪಸ್ಥಿತರಿದ್ದರು.